ಸಿ.ಎಸ್.ಐ. ಕರ್ನಾಟಕ ಮಧ್ಯಪ್ರಾಂತ್ಯ

ಆರಾಧನಾ ಕ್ರಮ– ಜೂನ್ 2019 ದೇವರ ಸೃಷ್ಟಿಯ ಆರೈಕೆ (ಪರಿಸರ ಭಾನುವಾರ)

ಪ್ರಾರ್ಥನೆ: ಸೃಷ್ಟಿಕರ್ತನಾದ ದೇವರೇ, ನೀನು ಸೃಷ್ಟಿಯಲ್ಲಿ ಎಲ್ಲವೂ ಒಳ್ಳೆಯದೆಂದು ನೋಡಿ ಅದ್ಭುತವೆಂದು ಹೇಳಿದ್ದೀ, ಪರಿಪಾಲಕನಾದ ದೇವರೇ, ನೀನು ಎಲ್ಲವನ್ನು ಪೋಷಿಸಿ ಪರಿಪಾಲಿಸಲೆಂದು ಬೆಳೆಸಿ ರಮ್ಯವೆಂದು ಹೇಳಿದ್ದೀ, ವಿಮೋಚಕನಾದ ದೇವರೇ, ನೀನು ಕಾರ್ಯನಿರತನಾಗಿ, ನಿನ್ನ ನಂಬಿಕೆ– ವಿಶ್ವಾಸವನ್ನು ಸ್ಥಾಪಿಸಿ ಅಮೋಘವೆಂದು ಹೇಳಿದ್ದೀ, ಮಾರ್ಗದರ್ಶಿಯಾದ ನಿತ್ಯ ಪ್ರಸನ್ನ ದೇವರೇ, ನಿನ್ನನ್ನು ಸತ್ಯದಿಂದಲೂ ಆತ್ಮದಿಂದಲೂ ಆರಾಧಿಸಲು ಸಹಾಯ ಮಾಡು. ಆಮೆನ್.

ಸಂಗೀತ: ಕನ್ನಡ ಸಂಗೀತ ಸಂಗ್ರಹ 01

ಕರೆ: ತ್ರಯೈಕ ದೇವರ ನಾಮದಲ್ಲಿ ಆರಾಧನೆಯನ್ನು ಆರಂಭ ಮಾಡುವಂತೆ ದೇವರಲ್ಲಿ ಸ್ಥಿರವಾಗಿದ್ದು ಕರ್ತನಲ್ಲಿ ಭರವಸದಿಂದಿರೋಣ ಯಾಕೆಂದರೆ ನಮ್ಮ ದೇವರು ನಮ್ಮ ಮಧ್ಯೆವಾಸಮಾಡುವಾತನು ಆತನು ಸಮಾಧಾನ ಹಾಗೂ ನ್ಯಾಯವನ್ನು ಸ್ಥಾಪಿಸಿ, ಇಡೀ ಸೃಷ್ಟಿಯಲ್ಲಿ ಸೌಂಧರ್ಯವನ್ನೂ ಲಾವಣ್ಯವನ್ನು ರೂಪಿಸಿದ್ದಾನೆ. ಆಮೆನ್

ಧರ್ಮಶಾಸ್ತ್ರ– ಪ್ರವಾದಿಗಳ ಮಾತುಗಳನ್ನು ನಮ್ಮ ಯೇಸು ಕರ್ತನು ಹೀಗೆ ನುಡಿದಿದ್ದಾನೆ. ನಮ್ಮ ಕರ್ತನಾದ ದೇವರು ಒಬ್ಬನೇ; ನಾವು ಆತನನ್ನು ಯುಕ್ತಿ ಪೂರ್ವಕವಾಗಿ ಪೂರ್ಣ ಹೃದಯ, ಆತ್ಮ, ಮನಸ್ಸು ಮತ್ತು ಶಕ್ತಿಯಿಂದ ಪ್ರೀತಿಸೋಣ. ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸು; ದೇವರ ಸ್ವರೂಪವನ್ನು ಹಂಚಿಕೊಂಡಿರುವ ದೇವರ ಕೈಕೆಲಸವಾಗಿರುವ ಪ್ರಕೃತಿಯನ್ನು ಬುದ್ಧಿಪೂರ್ವಕವಾಗಿ ಪ್ರೀತಿಸೋಣ.

ಪರಿಸರದೊಲವಿನ ಹತ್ತು ಆಜ್ಞೆಗಳು (ಉತ್ತರ– ಪ್ರತ್ಯುತ್ತರ)

ನಾಯಕರು: ನಾನಲ್ಲದೇ ನಿನಗೆ ಬೇರೇ ದೇವರುಗಳು ಇರಬಾರದು.

ಎಲ್ಲರೂ: ಸೃಷ್ಟಿಕರ್ತನಾದ ದೇವರೇ, ನಿನ್ನ ಸೃಷ್ಟಿಯನ್ನು ಆರಾಧನೆ ಮಾಡದಿರಲು ಸಹಾಯ ಮಾಡು.

ನಾ: ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು; ಅವುಗಳನ್ನು ಪೂಜಿಸಲೂಬಾರದು

ಎ: ದೇವರೇ, ನಿನ್ನನ್ನು ಸತ್ಯದಿಂದಲೂ ಆತ್ಮದಿಂದಲೂ ಆರಾಧಿಸುತ್ತೇವೆ; ನಿನಗೆ ಬದಲಾಗಿ ಬೇರೇ ಮೂರ್ತಿಗಳನ್ನು ಬದಲೀಗೊಳಿಸದಂತೆ ಸಹಾಯಮಾಡು.

ನಾ: ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು.

ಎ: ಎಲ್ಲಾ ಸಂಪನ್ಮೂಲಗಳಿಗೆ ಮೂಲನಾದ ದೇವರೇ, ನೈಸರ್ಗಿಕ ಕೊಡುಗೆಗಳನ್ನು ಪರಿಪಾಲಿಸಲು ಸಹಾಯ ಮಾಡು.

ನಾ: ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಎ: ನೀನು ಸಬ್ಬತ್ ದಿನದಂದು ವಿಶ್ರಮಿಸಿ, ಅದನ್ನು ಪರಿಶುದ್ಧವೆಂದು ನುಡಿದಿದ್ದೀ, ನಿನ್ನ ಅನುಗ್ರಹದ ಭೂಮಿಗೆ ಜೂಬಿಲಿ ಸಮಯವನ್ನು ನೀಡಲು ನೆನಪಿಸಿ ಸಹಾಯಮಾಡು.

ನಾ: ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.

ಎ: ತಂದೆಯೂ ತಾಯಿಯೂ ಆದ ದೇವರೇ, ಮಾತೃ ಭೂಮಿಯನ್ನು, ತಂದೆಯ ನೆಲವನ್ನು ಸನ್ಮಾನಿಸಲು ಸಹಾಯ ಮಾಡು.

ನಾ: ನರಹತ್ಯ ಮಾಡಬಾರದು.

ಎ: ಜೀವದ ಒಡೆಯನಾದ ದೇವರೇ, ಎಲ್ಲಾ ಜೀವಿಗಳನ್ನು ಗೌರವಿಸಿ, ಸನ್ಮಾನಿಸಲು ಸಹಾಯ ಮಾಡು.

ನಾ: ವ್ಯಭಿಚಾರ ಮಾಡಬಾರದು.

ಎ: ನಂಬಿಗಸ್ಥನಾದ ದೇವರೇ, ನಮ್ಮ ಮನೆವಾರ್ತೆಯನ್ನು ಆಲೋಚನಾ ಪೂರ್ವಕವಾಗಿ ನಿರ್ವಸಲು ಸಹಾಯಮಾಡು.

ನಾ: ಕದಿಯಬಾರದು.

ಎ: ನೀತಿವಂತನಾದ ದೇವರೇ, ಭೂಮಿಯ ಸಂಪನ್ಮೂಲಗಳನ್ನು ಸ್ವಾರ್ಥಕ್ಕಾಗಿ ಬಳಸದಂತೆ ಸಹಾಯಮಾಡು.

ನಾ: ಮತ್ತೊಬ್ಬನ ಮೇಲೆ ಸುಳ್ಳುಸಾಕ್ಷಿ ಹೇಳಬಾರದು.

ಎ: ಗುರುವಾಗಿರುವ ದೇವರೇ, ಸಹ–ಸೃಷ್ಟಿಗಳಾಗಿರುವ ನಿನ್ನ ಕರೆಗೆ ಸತ್ಯವಾಗಿರಲು ಸಹಾಯಮಾಡು.

ನಾ: ಮತ್ತೊಬ್ಬನ ಮನೆಯನ್ನು ಆಶಿಸಬಾರದು; ಮತ್ತೊಬ್ಬನ ಹೆಂಡತಿ ಗಂಡಾಳು ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವದನ್ನು ಆಶಿಸಬಾರದು.

ಎ: ದೇವರೇ, ನಿನ್ನ ಸ್ವಭಾವವು ಸ್ಥಿರವಾದದ್ದು; ನಾವು ನಿನ್ನ ಆಸ್ತಿಗೆ ಒಡೆಯರಾಗಬಯಸದಂತೆ ನಮ್ಮನ್ನು ನಡೆಸು. ಆಮೆನ್.

ಸ್ತುತಿ ಹಾಗೂ ಕೃತಜ್ಞತಾ ಪ್ರಾರ್ಥನೆ:

ನಾ: ಆಕಾಶವನ್ನು ಉಂಟುಮಾಡಿದ ದೇವರೇ, ಅಗಾಧವಾದ ನಿನ್ನ ಸೃಜನಾಶೀಲ ಮನಸ್ಸು, ಅದ್ಭುತವಾಗಿರುವ ಅವುಗಳ ಕಾರ್ಯರೂಪವು ಎಣಿಸಲಸಾಧ್ಯವಾಗಿವೆ.

ಎ: ದೇವರೇ, ನಿನ್ನ ಕೃತ್ಯಗಳು ಎಷ್ಟೋ ಶ್ರೇಷ್ಟವಾಗಿವೆ, ನಿನ್ನ ಆಲೋಚನೆಗಳು ಅಶೋಧ್ಯವಾಗಿವೆ.

ನಾ: ಭೂಮಿಯನ್ನು ಸೃಷ್ಟಿಸಿದ ನಮ್ಮ ದೇವರೇ, ವಿಭಿನ್ನವಾದ ನಿನ್ನ ಆಲೋಚನಾಗ್ರಹಿಕೆ ಮತ್ತು ಪರಿಣಾಮಕಾರಿಯಾದ ಸೃಷ್ಟಿಯ ಸಮತೋಲನವು ಆಶ್ಚರ್ಯವಾಗಿದೆ.

ಎ: ದೇವರೇ, ನಿನ್ನ ಕೃತ್ಯಗಳು ಎಷ್ಟೋ ಶ್ರೇಷ್ಟವಾಗಿವೆ, ನಿನ್ನ ಆಲೋಚನೆಗಳು ಅಶೋಧ್ಯವಾಗಿವೆ.

ನಾ: ನಮ್ಮ ಸೃಷ್ಟಿಕರ್ತನಾದ ದೇವರೇ, ಸೃಷ್ಟಿಯನ್ನು ವಿಮೋಚಿಸಿ ಗೋಚರವಾಗಿರುವ ಕೃಪೆಯ ಚಿನ್ಹೆಗಳ ಮೂಲಕ ನಿನ್ನ ಪ್ರಭಾವ ಹಾಗೂ ವೈಭವವನ್ನು ಪ್ರಕಟಿಸುತ್ತೀ.

ಎ: ದೇವರೇ, ನಿನ್ನ ಕೃತ್ಯಗಳು ಎಷ್ಟೋ ಶ್ರೇಷ್ಟವಾಗಿವೆ, ನಿನ್ನ ಆಲೋಚನೆಗಳು ಅಶೋಧ್ಯವಾಗಿವೆ.

ಪಾಪದರಿಕೆಯ ಕರೆ: ಶಾಂತಿಸ್ವರೂಪಿಯೂ ನೀತಿಸ್ವರೂಪಿಯೂ ಆದ ದೇವರೇ, ನಿನ್ನ ಇಡೀ ಸೃಷ್ಟಿಯನ್ನು ನಾವು ಅನುಭವಿಸುವವರಾಗಿದ್ದೇವೆ, ಆದರೆ ನಿನ್ನ ಮನೆವಾರ್ತೆಯ ಕೆಲಸಕ್ಕಾಗಿ ನಮ್ಮನ್ನು ಕರೆದಿದ್ದೇ, ಕೃಪೆ ಹಾಗೂ ಕಾರಣ್ಯದ ನಿಮಿತ್ತ ನಿನ್ನ ಇಡೀ ಸೃಷ್ಟಿಯನ್ನು ನಮ್ಮ ಜವಾಬ್ದಾರಿಯುತವಾಗಿ ಮನ:ಪೂರ್ವಕವಾಗಿ ಪರಿಗಣಿಸಲು ಸಹಾಯಮಾಡು. ನಮ್ಮ ಸ್ವಂತ ಕೆಲಸಗಳ ನಿಮಿತ್ತ ನಮ್ಮ ಬೇಜವಾಬ್ದಾರಿಕೆಯನ್ನು ಕ್ಷಮಿಸೆಂದು ಬೇಡುತ್ತೇವೆ.

ಮಗು: ದೇವರೇ, ನನ್ನ ಮುಗ್ಧತೆ ಹಾಗೂ ಅಜ್ಞಾನದ ನಿಮಿತ್ತ ನಾನು ನಿನ್ನ ಸೃಷ್ಟಿಯನ್ನು ಕಾಪಾಡಲಿಲ್ಲ. ಎಲೆ, ಹೂವನ್ನು ನೋಡಿದ ಕೂಡಲೇ ಅವುಗಳನ್ನು ಕಿತ್ತು, ನಾಶಮಾಡುವ ಶೋಧನೆಗೆ ಒಳಗಾಗಿದ್ದೇನೆ. ನನ್ನನ್ನು ಕ್ಷಮಿಸು ದೇವಾ.

ಯುವಕ/ಕಿ: ದೇವರೇ, ನನ್ನ ಜೀವನವನ್ನು ರೂಪಿಸಿಕೊಳ್ಳುವ ಅವಸರ ಹಾಗೂ ಆತುರತೆಯಲ್ಲಿ ನಿನ್ನ ಸೃಷ್ಟಿಯನ್ನು ಪ್ರೀತಿಸಲಿಲ್ಲ. ನನ್ನ ಗುರಿಗಳನ್ನು ತಲುಪುವ ವಾಂಛೆಯಿಂದ ಲಾಭಕ್ಕಾಗಿ ಅದನ್ನು ಬಳಸಿದ್ದೇನೆ. ನನ್ನನ್ನು ಕ್ಷಮಿಸು ದೇವರೇ.

ಮಧ್ಯಪ್ರಾಯದವರು: ದೇವರೇ, ನನ್ನ ಒತ್ತಡದ ಜೀವನದಲ್ಲಿ ಮನೆ ಹಾಗೂ ಕೆಲಸದ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ನಾನು ನಿನ್ನ ಸೃಷ್ಟಿಯಲ್ಲಿ ಆನಂದಿಸಲಿಲ್ಲ. ಲೋಕದಲ್ಲಿರುವ ಸ್ಪರ್ಧಾತ್ಮಕತೆಯ ನಿಮಿತ್ತ ಸೃಷ್ಟಿಯಲ್ಲಿ ನಿನ್ನ ಒಳ್ಳೇದನ್ನು ನೋಡಲಿಲ್ಲ ನನ್ನನ್ನು ಕ್ಷಮಿಸು ದೇವರೇ.

ಹಿರಿಯ ನಾಗರೀಕರು: ದೇವರೇ, ನನ್ನ ಪರಿಮಿತ ಸ್ಥಳದಲ್ಲಿ ನಿನ್ನ ಸೃಷ್ಟಿಯನ್ನು ಆನಂದಿಸುವ ಸಮಯವಿದುವೇ, ಅದರಿಂದ ಒಳ್ಳೇದನ್ನು ಕಲಿತಿದ್ದೇನೆ. ನಾನು ಮಗ–ಮಗಳು, ತಂದೆ–ತಾಯಿ, ಒಡಹುಟ್ಟಿದವರು, ಅಜ್ಜ–ಅಜ್ಜಿ ಸ್ನೇಹಿತರು ಸಂಗಾತಿಯಾಗಿ ಕುಟುಂಬದ ಕಾರ್ಯಗಳನ್ನು ಹಾಗೂ ವೃತ್ತಿಯ ಜವಾಬ್ದಾರಿಗಳನ್ನು ವಹಿಸಿದ್ದೇನೆ. ಆದರೆ, ನಿನ್ನ ಮನೆವಾರ್ತೆಯ ವ್ಯಕ್ತಿಯಾಗಿ ಕಾರ್ಯಮಾಡಲು ಸಮಯ ನೀಡಲಿಲ್ಲ. ನನ್ನನ್ನು ಕ್ಷಮಿಸು ದೇವರೇ.

ಸಮಾಧಾನದ ವಾಕ್ಯ: ಕರ್ತನು ಇಂತೆನ್ನುತ್ತಾನೆ, ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ ಹಿತದ ಯೋಚನೆಗಳೇ. ಯೆರೆ.29:11.

ದೇವರು ಲೋಕದಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ಯೋಹಾ 3:16.

ಆದರೂ ಅದಕ್ಕೊಂದು ನಿರೀಕ್ಷೆಯುಂಟು; ಏನೆಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದೇ. ರೋಮ. 8:21.

ಪ್ರಾರ್ಥನೆ: ದೇವರು ಅನುಗ್ರಹಿಸಿದ ಭೂಮಿಯಲ್ಲಿಯೇ ನಿಮಗೆ ಸಮಾಧಾನವಾಗಲಿ ಹಾಗೂ ಕ್ಷೇಮವಾಗಲಿ. ದೇವರು ಅನುಗ್ರಹಿಸಿದ ಭೂಮಿಗಾಗಿ ಪ್ರಾರ್ಥಿಸೋಣ ಯಾಕೆಂದರೆ, ಅದರ ಕ್ಷೇಮವೇ ನಮ್ಮ ಕ್ಷೇಮ.

ವಿಶೇಷ ಪ್ರಾರ್ಥನೆ: ಸರ್ವಶಕ್ತನಾದ ದೇವರೇ, ನಿನ್ನ ಸೃಷ್ಟಿಯಲ್ಲಿರುವ ಐಶ್ವರ್ಯದಲ್ಲಿ ಸಂತೋಷಿಸುತ್ತೇವೆ. ನಿನ್ನ ಸೃಷ್ಟಿಯಲ್ಲಿ ನಿನ್ನ ಮಹಿಮೆಯನ್ನು , ನಿನ್ನ ಬರೋಣವನ್ನು, ಮತ್ತು ನಿನ್ನ ಪ್ರಸನ್ನತೆಯ ಅನುಭವದ ಗುರುತನ್ನು ಕಾಣುತ್ತೇವೆ. ನೀನು ನೀಡಿದ ಸೃಷ್ಟಿಯನ್ನು ಪರಿಪಾಲಿಸಲು ನಮಗೆ ಸಹಾಯಮಾಡು ಆಮೂಲಕ ನೀನು ನೀಡಿದ ಎಲ್ಲವನ್ನು ನಿನ್ನ ಮಹಿಮೆಗೆ ಬಳಸಲು ಕೃಪೆತೋರು. ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸೃಷ್ಟಿಸಿದ ಎಲ್ಲಾ ಅಧಿಕಾರವನ್ನು ಒಪಿಪಿಸಿಕೊಟ್ಟಿದ್ದೇವೆ. ನಿನ್ನೊಂದಿಗೂ ಪವಿತ್ರಾತ್ಮನೊಂದಿಗೂ ಕೂಡಿರುವ ಏಕದೇವರಾಗಿ ಸದಾ ಜೀವಿಸಿ ಆಳುವಾತನಿಗೆ ಸಕಲ ಮಾನಮಹಿಮೆಗಳು ನಿರಂತರವಾಗಿರಲಿ.

ವೇದಪಾರಾಯಣ: ಆದಿಕಾಂಡ 1:28–31; ಕೀರ್ತ. 104: 1–23; ಪ್ರಕ. 22:1–5; ಲೂಕ 1:22–31

ವಿಶೇಷಗೀತೆ/ಕಿರುನಾಟಕ

ವಾಕ್ಯ ಸಂದೇಶ

ವಿಶ್ವಾಸದರಿಕೆ

ಸಭಾಪ್ರಕಟನೆ

ಪರಾರ್ಥಪ್ರಾರ್ಥನೆ: ಯೇಸು ಕರ್ತನೇ, ನೀನು ನಮಗಾಗಿ ಪ್ರಾರ್ಥಿಸುತ್ತೀ, ನಾವು ಪ್ರಾರ್ಥನೆಯಲ್ಲಿ ನಮ್ಮ ಸ್ವರಗಳನ್ನು ಒಗ್ಗೂಡಿಸಲು ಸಹಾಯಿಸು. ನಾವು ಪಂಚಭೂತಗಳಿಗಾಗಿಯೂ ಅವುಗಳೊಂದಿಗೂ ಪ್ರಾರ್ಥಿಸುತ್ತೇವೆ.

ಸ್ವರ 1 ಗಾಳಿ: ದೇವರೇ, ನಾನು ನಿನ್ನ ಸೃಷ್ಟಿಯಾಗಿದ್ದೇನೆ ಹಾಗೂ ಚಿಗುರೊಡೆಯುವ ಬೀಜಗಳನ್ನು ಪಸರಿಸುತ್ತೇನೆ. ಆದರೂ ನನ್ನನ್ನು ನಾಶಮಾಡುವ ಮೂಡಣಗಾಳಿಯೆಂದೇ ಪರಿಗಣಿಸುತ್ತಾರೆ.

ಎಲ್ಲರೂ: ನೀನು ನನ್ನನ್ನು ಸೃಷ್ಟಿಸಿರುವ ಉದ್ದೇಶವನ್ನು ನಾನು ತಿಳಿದಿರುವಂತೆ ಇತರರು ನನನ್ನು ಗ್ರಹಿಸಿಕೊಳ್ಳಲು ಸಹಾಯಮಾಡು.

ಸ್ವರ 2 ಅಗ್ನಿ: ದೇವರೇ, ನಾನು ಪವಿತ್ರಾತ್ಮನ ಗುರುತಾಗಿದ್ದೇನೆ. ಆದರೆ ಪಾತಾಳದಲ್ಲಿ ಉರಿಯುವ ಬೆಂಕಿ ಎಂದೇ ಪರಿಗಣಿಸಿದ್ದಾರೆ.

ಎಲ್ಲರೂ: ನೀನು ನನ್ನನ್ನು ಸೃಷ್ಟಿಸಿರುವ ಉದ್ದೇಶವನ್ನು ನಾನು ತಿಳಿದಿರುವಂತೆ ಇತರರು ನನನ್ನು ಗ್ರಹಿಸಿಕೊಳ್ಳಲು ಸಹಾಯಮಾಡು.

ಸ್ವರ 3 ಜಲ: ದೇವರೇ, ನಾನು ಜೀವದ ಮೂಲವಾಗಿದ್ದೇನೆ. ಆದರೆ ನನ್ನನ್ನು ಜಗಳಕ್ಕೂ ಯುದ್ಧಕ್ಕೂ ಪರಿಗಣಿಸಿದ್ದಾರೆ

ಎಲ್ಲರೂ: ನೀನು ನನ್ನನ್ನು ಸೃಷ್ಟಿಸಿರುವ ಉದ್ದೇಶವನ್ನು ನಾನು ತಿಳಿದಿರುವಂತೆ ಇತರರು ನನನ್ನು ಗ್ರಹಿಸಿಕೊಳ್ಳಲು ಸಹಾಯಮಾಡು.

ಸ್ವರ 4 ಪೃಥ್ವಿ: ದೇವರೇ, ಜೀವವನ್ನು ಪೋಷಿಸುತ್ತಾ ಇಡೀ ಸೃಷ್ಟಿಯನ್ನು ಹೊತ್ತು ಕೊಂಡಿರುವ ಭೂಮಿಯಾಗಿದ್ದೇನೆ. ಆದರೆ ನಾನು ಆಶೀರ್ವಾದವಾಗಿಲ್ಲ ನನ್ನನ್ನು ಆಸ್ತಿಯೆಂದೇ ಪರಿಗಣಿಸಿದ್ದಾರೆ.

ಎಲ್ಲರೂ: ನೀನು ನನ್ನನ್ನು ಸೃಷ್ಟಿಸಿರುವ ಉದ್ದೇಶವನ್ನು ನಾನು ತಿಳಿದಿರುವಂತೆ ಇತರರು ನನನ್ನು ಗ್ರಹಿಸಿಕೊಳ್ಳಲು ಸಹಾಯಮಾಡು.

ಸ್ವರ 5 ಆಕಾಶ: ದೇವರೇ, ನಿನ್ನ ವಿಶಾಲತೆ ಹಾಗೂ ಬಾಹ್ಯಾಕಾಶವನ್ನು ಆವರಿಸಿದ್ದೇನೆ. ಆದರೆ ಅಲ್ಲಿಯೂ ಎಲ್ಲೆಯ ಸಮಸ್ಯೆಗೊಳಗಾಗಿದ್ದೇನೆ.

ಎಲ್ಲರೂ: ನೀನು ನನ್ನನ್ನು ಸೃಷ್ಟಿಸಿರುವ ಉದ್ದೇಶವನ್ನು ನಾನು ತಿಳಿದಿರುವಂತೆ ಇತರರು ನನನ್ನು ಗ್ರಹಿಸಿಕೊಳ್ಳಲು ಸಹಾಯಮಾಡು.

ಆಶೀರ್ವಚನ: ಜೀವಕ್ಕೆ ಮೂಲನೂ , ಜೀವನಕ್ಕೆ ಬಲವೂ ಆಗಿರುವ ಸರ್ವಶಕ್ತನ ಆಶೀರ್ವಾದವು ತ್ರಯೇಕ ದೇವರ ನಾಮದ ಐಕ್ಯತೆಯಂತೆ ನಮ್ಮೊಂದಿಗೆ ಈಗಲೂ ಯಾವಾಗಲು ನೆಲೆಯಾಗಿರಲಿ.